## 1

ರಷ್ಯಾದ ಲೇಖಕ ಟಾಲ್‌ಸ್ಟಾಯ್‌ನ ಹೆಂಡತಿ ಸೋಫಿಯಾಳ ಪ್ರಸಂಗದಿಂದ ಆರಂಭಿಸಬೇಕು ಎನ್ನಿಸುತ್ತಿದೆ. ನನ್ನನ್ನು ಸದಾ ಕಾಡುತ್ತಲೇ ಇರುವ ಪ್ರಸಂಗ ಅದು. ಟಾಲ್‌ಸ್ಟಾಯ್ ಅದಾಗಲೇ ಜಗತ್ತಿನ ಕಣ್ಮಣಿಯಾಗಿದ್ದ ಸಮಯ. ಗಾಂಧಿ ಮತ್ತು ಟಾಲ್‌ಸ್ಟಾಯ್ ಪರಸ್ಪರ ಪೂರಕ ಎಂಬಂತೆ ವಿಚಾರ ವಿನಿಮಯ ಮಾಡುತ್ತಿದ್ದ, ಒಬ್ಬರು ಮತ್ತೊಬ್ಬರ ಪ್ರಯೋಗಗಳಿಂದ ಪ್ರಭಾವಿತರಾಗುತ್ತಿದ್ದ ಕಾಲ. ವ್ಯಕ್ತಿತ್ವ, ಬದುಕು, ಬರವಣಿಗೆ ಎಲ್ಲವನ್ನೂ ಒಂದಾಗಿಸಲು ಸಾಧ್ಯವೇ ಎಂದು ಟಾಲ್‌ಸ್ಟಾಯ್ ಉತ್ಕಟವಾಗಿ ಹಂಬಲಿಸಿ ಹಲುಬುತ್ತಿದ್ದ ಕಾಲದಲ್ಲಿಯೇ ನಡೆದ ಘಟನೆ ಇದು. 'ಲೋಕದ ಎದುರಿಗೆ ಈತ ಬ್ರಹ್ಮಚರ್ಯದ ಬಗೆಗೆ, ಆತ್ಮನಿಯಂತ್ರಣದ ಬಗೆಗೆ ಅದೆಷ್ಟು ಮಾತನಾಡುತ್ತಾನೆ, ಅವು ಅವನ ಆತ್ಮದ ಕನವರಿಕೆಗಳೋ ಅನ್ನುವಂತೆ, ಲೋಕವೆಲ್ಲ ತಲೆದೂಗುವಂತೆ. ಆದರೆ, ಗೆಳೆಯರ ಜೊತೆ ಅಷ್ಟೆಲ್ಲ ಮಾತನಾಡಿ, ಒಳಗೆ ಬೆಡ್ ರೂಮಿನಲ್ಲಿ ಮಾಡುವುದೇನು? ನಾನು ಮತ್ತೊಮ್ಮೆ ಬಸುರಿಯಾಗುವಂತೆ ಮಾಡುವುದಷ್ಟೆ. ಹೆಣ್ಣುಮಕ್ಕಳ ಆತ್ಮಕಥನಗಳು ಹುಟ್ಟುವುದು ಮತ್ತು ಕೊನೆಯಾಗುವುದು ಬೆಡ್ ರೂಮಿನಲ್ಲಿ' ಎನ್ನುವ ಅರ್ಥದ ಮಾತುಗಳನ್ನು ಸೋಫಿಯಾ ತನ್ನ ಡೈರಿಯಲ್ಲಿ ಬರೆಯುತ್ತಾಳೆ. ಯಥಾಪ್ರಕಾರ ಟಾಲ್‌ಸ್ಟಾಯ್‌ನ ಬರಹ ಮತ್ತು ಬದುಕಿನ ಎದುರಿಗೆ ಸೋಫಿಯಾಳ ಈ ಮಾತುಗಳು ನೇಪಥ್ಯದಲ್ಲಿಯೇ ಉಳಿಯುತ್ತವೆ.

ಪಂಡಿತ ರವಿಶಂಕರರ ಜಗತ್ಪ್ರಸಿದ್ಧ ಆತ್ಮಕಥೆ 'ರಾಗಮಾಲ'. ಸಂಗೀತದೊಂದಿಗಿನ ಅವರ ಆತ್ಮಸಖ್ಯವನ್ನು ಹೇಳಹೇಳುತ್ತಲೇ ನಿರ್ಭಿಡೆಯಿಂದ ಅವರ ವೈಯಕ್ತಿಕ ಬದುಕನ್ನೂ ಅನಾವರಣಗೊಳಿಸುತ್ತಾ ಹೋಗುತ್ತದೆ ಈ ಕೃತಿ. ತಮ್ಮ ಬದುಕಿನಲ್ಲಿ ಹಾದುಹೋದ ಹೆಣ್ಣುಮಕ್ಕಳ ವರ್ಣರಂಜಿತ ಮೆರವಣಿಗೆಯೂ ಇಲ್ಲಿ ಕಾಣಿಸುತ್ತದೆ. ಆ ಹೆಣ್ಣುಮಕ್ಕಳನ್ನು ಕುರಿತಂತೆ ಗೌರವಕ್ಕಿಂತ ಹೆಚ್ಚಾಗಿ ಅವರು ತಮ್ಮ ಬದುಕಿಗೆ ತುಂಬಿದ ಬಣ್ಣವೇ ಮುಖ್ಯವಾಗಿರುವಂತೆ ನಿರೂಪಿಸುತ್ತಾರೆ. ಅವರ ಸೌಂದರ್ಯ, ಅವರನ್ನು ಕುರಿತು ತಾನು ಹುಚ್ಚನಂತೆ ನಡೆದುಕೊಂಡದ್ದು, ಆಮೇಲೆ ತಾನೇ ತಾನಾಗಿ ಆ ಸಂಬಂಧಗಳಿಂದ ಕಳಚಿಕೊಂಡದ್ದು, ಈ ಎಲ್ಲದರಿಂದ ತನ್ನ ದಾಂಪತ್ಯದಲ್ಲಾದ ಅಲ್ಲೋಲಕಲ್ಲೋಲ ಈ ಎಲ್ಲವನ್ನೂ ಒಂದು ರಾಗದಂತೆಯೇ ಆಲಾಪ ಮಾಡುತ್ತಾ ಹೋದವರು ಕೊನೆಗೆ ಸುಕನ್ಯಾ ಜೊತೆಗಿನ ಸಂಬಂಧಕ್ಕೆ ಬಂದಾಗ ಇದ್ದಕ್ಕಿದ್ದಂತೆ ಎಚ್ಚೆತ್ತವರಂತೆ ಬರೆಯುತ್ತಾರೆ. ಸುಕನ್ಯಾ ತನ್ನನ್ನು ವಿಲಕ್ಷಣವಾದ ಸನ್ನಿವೇಶಗಳಲ್ಲಿಯೂ ಮದುವೆಯಾಗಲು ಹೊರಟಾಗ ಇವರಿಗೆ ಆಘಾತವೇ ಆಗುತ್ತದೆ. ಈ ಸಂಬಂಧದಿಂದ ಒಂದು ಮಗು ಬೇಕೇ ಬೇಕೆಂದು ಆಕೆ ಹಂಬಲಿಸುತ್ತಾರೆ. ಇನ್ನೂ ಮೊದಲ ಮದುವೆಯಿಂದ ವಿಚ್ಛೇದನವೇ ಸಿಗದಿದ್ದ ಹೊತ್ತಿನಲ್ಲಿಯೂ ಆಕೆ ಗರ್ಭಿಣಿಯಾಗುತ್ತಾರೆ. ಅದೂ ರವಿಶಂಕರರ ಕಠಿಣ ಕರಾರಿನ ಜೊತೆಯಲ್ಲಿ. 'ಮಗು ಬೇಕೆಂದರೆ ನೀನು ನಿನ್ನ ರಿಸ್ಕಿನಲ್ಲಿ ಮಾಡಿಕೊಳ್ಳಬೇಕು, ಆ ಮಗುವಿನ ಯಾವ ಜವಾಬ್ದಾರಿಯನ್ನೂ ತಾನು ಹೊರುವುದಿಲ್ಲ' ಎನ್ನುವುದೇ ಆ ಕರಾರು. ಮುಂದೆ ಅವರಿಬ್ಬರ ಮದುವೆಯಾಯಿತು, ಆ ಮಗುವಿನ ಜವಾಬ್ದಾರಿಯನ್ನು ಅವರು ಹೊತ್ತರು ಎನ್ನುವುದು ಬೇರೆಯ ಮಾತು. ಆದರೆ, ಒಂದು ವೇಳೆ ಮದುವೆ ಸಾಧ್ಯವೇ ಆಗದೇ ಇದ್ದರೆ, ಯಾವ ಕಾರಣಕ್ಕೂ ತಾನು ಆ ಮಗುವಿಗೆ ಜವಾಬ್ದಾರನಲ್ಲ ಎನ್ನುವ ಗಂಡಿನ ಠೇಂಕಾರ, ಕ್ರೌರ್ಯವನ್ನು ಹೇಳಿಕೊಳ್ಳುವಲ್ಲಿ ಅವರಿಗೆ ಯಾವ ನಾಚಿಕೆಯೂ ಇಲ್ಲ. ಬದಲಿಗೆ, ಬೇಕಾಗಿದ್ದು ಅವಳಿಗೆ, ಅದರ ಕಷ್ಟಸುಖಗಳೂ ಅವಳವೇ ಎನ್ನುವ ಧೋರಣೆ. ನೀವು, ಓದುಗರು ಒಪ್ಪಿ, ಬಿಡಿ, ನಾನೆನ್ನುತ್ತೇನೆ, ರವಿಶಂಕರರ ಈ ಆತ್ಮಕಥನದಲ್ಲಿ ಅವರ ಬದುಕಿನ ಹೆಣ್ಣುಮಕ್ಕಳ ಆತ್ಮಕಥನದ ಅನುಕ್ತ ನಿರೂಪಣೆಯೂ ಇದೆಯೆಂದು. ಕಛೇರಿ ಮಾಡುವುದನ್ನೇ ಬಿಟ್ಟ, ಇವರಿಗಿಂತ ಎಷ್ಟೋ ಪಟ್ಟು ಹೆಚ್ಚು ಪ್ರತಿಭಾವಂತೆಯಾಗಿದ್ದ ಅವರ ಹೆಂಡತಿಯ ಆತ್ಮಕಥನದ ಕಛೇರಿ ನನಗಂತೂ ಇದರ